(6ನೇ ಪುಟದಿಂದ)

ಗಂಡು ಹಾಗೂ ಹೆಣ್ಣು ಹಕ್ಕಿಗಳೆರಡೂ ಮರಿಗಳ ಪಾಲನೆ ಪೋಷಣೆಯಲ್ಲಿ ಸಮಾನ ಜವಾಬ್ದಾರಿ ನಿರ್ವಹಿಸುವುದು ಈ ಹಕ್ಕಿಗಳ ವೈಶಿಷ್ಟ್ಯ. ಮರಿಗಳಿಗೆ ಇರುವೆ, ಸಣ್ಣ ಕೀಟಗಳನ್ನು ತಿನ್ನಿಸಿ ಬೆಳೆಸುತ್ತವೆ. ತಮ್ಮ ಕಂದಮ್ಮಗಳನ್ನು ಬೆಳೆಸಲು ಇನ್ನ್ಯಾರದೋ ಕಂದಮ್ಮಗಳನ್ನು ಕಬಳಿಸುವುದು ಪ್ರಕೃತಿಯ ಆಹಾರ ಸರಪಳಿಯಲ್ಲಿರುವ ವಿಪರ್ಯಾಸವೇ ಸರಿ.

ಗೂಡಿನಲ್ಲಿರುವ ಪುಟ್ಟ ಮರಿಗಳು ಗೂಡಿನಲ್ಲೇ ಮಲ ವಿಸರ್ಜನೆ ಮಾಡಿ ಗೂಡನ್ನು ಗಲೀಜು ಮಾಡುವುದಿಲ್ಲ. ಮರಿಗಳು ತಾಯಿ ಅಥವಾ ತಂದೆ ಹಕ್ಕಿ ಇರುವ ವೇಳೆಯಲ್ಲಿಯೇ ಮಲ ವಿಸರ್ಜನೆ ಮಾಡುತ್ತವೆ. ಮರಿಗಳು ಮಲ ವಿಸರ್ಜನೆ ಮಾಡಿದಾಗ, ಅಪ್ಪ– ಅಮ್ಮ ಮಲವನ್ನು ಕಚ್ಚಿಕೊಂಡು ಹೋಗಿ ಗೂಡಿನಿಂದ ದೂರ ಎಸೆಯುತ್ತವೆ. ಮಳೆ, ಅತಿಯಾದ ಬಿಸಿಲು ಬಂದರೆ ಅಪ್ಪ– ಅಮ್ಮ ರೆಕ್ಕೆಯನ್ನು ಗೂಡಿನ ಮೇಲೆ ಕೊಡೆಯಂತೆ ಬಿಡಿಸಿ ಕುಳಿತು ಮರಿಗಳಿಗೆ ರಕ್ಷಣೆ ಕೊಡುತ್ತವೆ. ಅಪ್ಪ– ಅಮ್ಮ ಗೂಡಿನ ಬಳಿ ಬರುತ್ತಿರುವುದನ್ನು ಸೂಕ್ಷ್ಮವಾಗಿ ಗ್ರಹಿಸುವ ಮರಿಗಳು, ಅದೇ ವೇಳೆಗೆ ಕತ್ತನ್ನೆತ್ತಿ ಊಟಕ್ಕೆ ತಯಾರಾಗಿರುತ್ತವೆ.

ಮರಿಗಳ ರೆಕ್ಕೆ ತುಸು ಬಲಿಯುತ್ತಿದ್ದಂತೆಯೇ 'ಕರಿಮುಡಿ'ಯ ಸಂಸಾರ ಗೂಡನ್ನು ತೊರೆಯುತ್ತದೆ. ಆದರೆ ಮರಿಗಳ ರೆಕ್ಕೆ ಪೂರ್ತಿಯಾಗಿ ಬಲಿತು, ಸರಾಗವಾಗಿ ಹಾರುವವರೆಗೂ ಅಪ್ಪ– ಅಮ್ಮ ಮರಿಗಳ ಜೊತೆಗೇ ಇದ್ದು ಪೋಷಿಸುತ್ತವೆ. ಆಹಾರ ಸರಪಳಿಯನ್ನು ಎದುರಿಸಿ ಯಶಸ್ವಿಯಾಗಿ ಬಾಣಂತನ ಮುಗಿಸಿದ ಕರಿಮುಡಿಯ ಸಂಸಾರದ ಕೆಲ ಚಿತ್ರಗಳು ಇಲ್ಲಿವೆ.



ಅಮ್ಮನ ಆರೈಕೆ



ಅಪ್ಪನಿಂದ ಆಹಾರ ಪೂರೈಕೆ